ಅಂಗನವಾಡಿ ಕಾರ್ಯಕರ್ತರ ಸಂಭಾವನೆ.

892(1293) ಶ್ರೀ ಕುನ್ನೂರು ಮಂಜುನಾಥ್ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಒಟ್ಟು ಸಂಖ್ಯೆ ಎಷ್ಟು ಅವರಿಗೆ ಪ್ರತಿ ತಿಂಗಳಿಗೆ ನೀಡುವ ಸಂಭಾವನೆ ಎಷ್ಟು;

ಆ) ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಭಾವನೆ (ಸ್ಕೇಲರಿ) ಹೆಚ್ಚಿಸುವುದು ಅವಶ್ಯವಿದ್ದು ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು;

ಇ) ಕೇಂದ್ರ ಸರ್ಕಾರದಿಂದ ಈ ಕುರಿತು ಎಷ್ಟು ಹಣ ಪ್ರತಿ ವರ್ಷ ಕೊಡುತ್ತಿರುವರು?

ಶ್ರೀಮತಿ ವಿಮಲಾಬಾಯಿ ಜಗದೇವ್ ರಾವ್ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :—

ಅ) ರಾಜ್ಯದಲ್ಲಿ ದಿನಾಂಕ :1-1-99ರಲ್ಲಿದ್ದಂತೆ 39053 ಅಂಗನವಾಡಿ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಭಾರತ ಸರ್ಕಾರದ ಮಾರ್ಗಸೂಚಿಗಳಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಕೆಳಕಂಡಂತೆ ಮಾಸಿಕ ಗೌರವಧನ ನೀಡಲಾಗುತ್ತಿದೆ.

	ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ
1) ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ	500	100
2) ಎಸ್‌ಎಸ್‌ಎಲ್‌ಸಿ ಪಾಸಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ	531	100
3) ಎಸ್‌ಎಸ್‌ಎಲ್‌ಸಿ ಪಾಸಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ	563	100
4) ಎಸ್‌ಎಸ್‌ಎಲ್‌ಸಿ ಫೇಲಾದವರಿಗೆ	438	100
5) ಎಸ್‌ಎಸ್‌ಎಲ್‌ಸಿ ಫೇಲಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ	469	100
6) ಎಸ್‌ಎಸ್‌ಎಲ್‌ಸಿ ಫೇಲಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ	500	100

ಅ) ರಾಜ್ಯ ಸರ್ಕಾರವು 1999-2000ನೇ ಸಾಲಿನ ಆಯವ್ಯಯಮಂಡನೆ ಪ್ರಸ್ತಾವನೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು ಮಾಹೆಯಾನ ರೂ.150 ಅನ್ನು ಹೆಚ್ಚಿಸುವ ಬಗ್ಗೆ ಪ್ರಕಟಿಸಿದೆ.

ಆ) ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ನೀಡುತ್ತಿರುವ ಗೌರವಧನವೂ ಸೇರಿದಂತೆ ಐಸಿಡಿಎಸ್ ಕಾರ್ಯಕ್ರಮದಡಿ ಸಂಪೂರ್ಣ ಆಡಳಿತ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತಿದೆ. ಪ್ರಸಕ್ತ ಸಾಲಿನಲ್ಲಿ ಫೆಬ್ರುವರಿ 99ರ ಅಂತ್ಯದಂತೆ 5542.51 ಲಕ್ಷ ರೂ.ಗಳನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುತ್ತದೆ.

ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆ.

893(1294) ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾವೇರಿ ಜಿಲ್ಲೆ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿಯಲ್ಲಿ ಈವರೆವಿಗೆ ಎಷ್ಟು ಮನೆಗಳು ಮಂಜೂರಾಗಿದೆ.

ಆ) ಸದರಿ ಮನೆಗಳ ಆಯ್ಕೆ ಅಂತಿಮಗೊಳಿಸುವ ಅಧಿಕಾರ ತಾಲ್ಲೂಕು ಆಶ್ರಯ ಸಮಿತಿಗೆ ಇದೆಯೇ ಇಲ್ಲವೇ?

ಇ) ತಾಲ್ಲೂಕು ಮಟ್ಟದ ಆಶ್ರಯ ಸಮಿತಿ ಆಯ್ಕೆ ಮಾಡಿದ ಫಲಾನುಭವಿಗಳ ಯಾರಿಯನ್ನು ತಡೆಹಿಡಿಯಲು ಹಾವೇರಿ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಥವಾ ಜಿಲ್ಲಾ ಪಂಚಾಯ್ತಿ ಅಧಿಕಾರಿಗಳಿಗೆ ತಡೆಹಿಡಿಯುವ ಅಧಿಕಾರ ಇದೆಯೇ?

ಈ) ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕು ಮಟ್ಟದ ಆಶ್ರಯ ಸಮಿತಿಯು ಫಲಾನುಭವಿಗಳಿಗೆ ಆಯ್ಕೆ ಪ್ರಕಾರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕೂಡಲೇ ನಿರ್ದೇಶನ ನೀಡಲಾಗುವುದೇ?